ದಿನಾಂಕಃ 11–11–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ರವರ ಪರ ವಕೀಲರಿಂದ,

1) ವಾದಿ ನನಗೆ ಹತ್ತು ವರ್ಷಗಳಿಂದ ಪರಿಚಯ ಇರುತ್ತಾರೆ. ಡೋರನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ನನ್ನ ಹೆಸರಿನಲ್ಲಿ ನಿವೇಶನ ಇದ್ದು, ಈಗ ಸದರಿ ನಿವೇಶನದಲ್ಲಿ ಮನೆಯನ್ನು ಕಟ್ಟಿರುತ್ತೇನೆ. ಸದರಿ ನಿವೇಶನ ಸಂಖ್ಯೆ 35/2 ಆಗಿರುತ್ತದೆ. ಸದರಿ ನಿವೇಶನವನ್ನು ವಾದಿಗೆ ಮಾರಾಟ ಮಾಡುತ್ತೇನೆ ಎಂದು ಒಪ್ಪಿ ದಿನಾಂಕ 23.10.2020 ರಂದು ಕರಾರು ಪತ್ರ ಬರೆದಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿವೇಶನವನ್ನು ವಾದಿಗೆ ರೂ. 11,45,000/- ಗಳಿಗೆ ಮಾರಾಟ ಮಾಡಿರುತ್ತೇನೆ ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಪತ್ರದ ಅಡಿಯಲ್ಲಿ ವಾದಿ ನನ್ನ ಹೆಸರಿಗೆ ರೂ. 1,50,000/- ಬ್ಯಾಂಕಿನ ಮೂಲಕ ನನ್ನ ಖಾತೆಗೆ ಜಮೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚೀಟಿ ಹಣವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 23.10.2020 ನಗದು ರೂಪದಲ್ಲಿ ರೂ. 1,95,000/- ವಾದಿ ನನಗೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಅಡಿಯಲ್ಲಿ ನನಗೆ ಒಟ್ಟು ರೂ. 3,45,000/- ದಿನಾಂಕ 23.10.2023 ಪಾವತಿ ಆಗಿರುತ್ತದೆ ಎಂದರೆ ಸರಿಯಲ್ಲ. ಕರಾರು ಪತ್ರದ ವಿಷಯವಾಗಿ ವಾದಿ ನನಗೆ ತಿಳುವಳಿಕೆ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ.

2) ಸಾಕ್ಷಿಗೆ ಈ ಹಂತದಲ್ಲಿ ದಿನಾಂಕ 23.10.2020 ರಂದು ಆಗಿರುವ ಜೆರಾಕ್ಸ್ ಕರಾರು ಪತ್ರವನ್ನು ತೋರಿಸಿದಾಗ ಸದರಿ ಕರಾರು ಪತ್ರದಲ್ಲಿ ಇರುವ ಸಹಿಯನ್ನು ತನ್ನದೇ ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲಾತಿಯನ್ನು **ನಿಶಾನೆ ಪಿ–07** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು **ನಿಶಾನೆ.ಪಿ–07(ಎ)** ಎಂದು ಗುರುತಿಸಲಾಯಿತು. ಹಣ ಸಂದ ರಶೀತಿಯನ್ನು ಸಾಕ್ಷಿಯು ಒಪ್ಪಿಕೊಂಡ ಕಾರಣ ಸದರಿ ದಾಖಲಾತಿಯನ್ನು **ನಿಶಾನೆ ಪಿ–08** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು

**ನಿಶಾನೆ.ಪಿ-08(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವ-ಇಚ್ಛೆಯಿಂದ ಚೀಟಿಯನ್ನು ಪಡೆದುಕೊಂಡಾಗ ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

3) ನಾನು ವಾದಿಯಿಂದ ಒಟ್ಟು ರೂ.5,25,000/- ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಮರುಪಾವತಿ ಮಾಡುವಂತೆ ವಾದಿ ನನ್ನ ಬಳಿ ಬಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಿಶಾನೆ ಪಿ-01 ಚೆಕ್ಕಿನಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಆದರೆ ಬರವಣಿಗೆ ನನ್ನದಾಗಿರುವುದಿಲ್ಲ. ವಾದಿ ನನಗೆ ಚೆಕ್ಕು ಅಮಾನ್ಯಗೊಂಡ ನಂತರ ತಿಳುವಳಿಕೆ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2023 ನೇ ಸಾಲಿನಲ್ಲಿ ಕೆಸ್ತೂರು ಕೊಪ್ಪಲು ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದೆ ಎಂದರೆ ಸರಿ. ನಾನು ವಾದ ಪತ್ರದಲ್ಲಿ ತಿಳಿಸಿರುವ ವಿಳಾಸದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ಉದ್ದೇಶ ಪೂರ್ವಕವಾಗಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಹಣ ಪಾವತಿ ಮಾಡುವುದನ್ನು ತಪ್ಪಿಸುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4) ನನ್ನ ವಿರುದ್ಧ ಯೊಗಾಂಭಾ ಎಂಬುವವರು ಸಿಸಿ ನಂ. 180/2022 ಚೆಕ್ಕು ಅಮಾನ್ಯ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸಿಸಿ ನಂ. 254/2022 ಪ್ರಕರಣವನ್ನು ಸಣ್ಣಸ್ವಾಮಿ ರವರು ದಾಖಲು ಮಾಡಿರುತ್ತಾರೆ ಎಂದರೆ ಸರಿ. ವಿನೋಭಾ ರವರು ಸಹ ನನ್ನ ವಿರುದ್ಧ ಚೆಕ್ಕು ಅಮಾನ್ಯ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸಿಸಿ ನಂ. 91/2024 ಪ್ರಕರಣವನ್ನು ಉಮೇಶ ರವರು ದಾಖಲು ಮಾಡಿರುತ್ತಾರೆ ಎಂದರೆ ಸರಿ. ನಾನು ವಾದಿಗೆ ಮೋಸ ಮಾಡಬೇಕೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ವಿರುದ್ಧ ಚೆಕ್ಕು ದುರುಪಯೋಗ ಪಡಿಸಿಕೊಂಡ ಬಗ್ಗೆ ದೂರು ದಾಖಲು ಮಾಡಿರುವುದಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ